**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**OS-95/2014** **PW-1**

**ದಿಃ 20.08.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಪಿ ಕೆ ಜೆ ವಕೀಲರಿಂದಃ**

ವಾದಿಯ ಆರೋಗ್ಯದ ಸ್ಥಿತಿಯ ಹೇಗಿರುತ್ತದೆಂದರೆ ಸಾಕ್ಷಿಯು ಅವರಿಗೆ ಮೊದಲು ಚಿಕನಗುನ್ಯಾ ಬಂದಿದ್ದು ಈಗ ಓಡಾಡುತ್ತಾರೆ ಮತ್ತು ಪ್ರಯಾಣ ಮಾಡುತ್ತಾರೆ. ಈ ಪ್ರಕರಣದಲ್ಲಿ ಸಹ ವಾದಿಯು ಸಾಕಷ್ಟು ಬಾರಿ ನ್ಯಾಯಾಲಯಕ್ಕೆ ಬಂದು ಹೋಗಿರುತ್ತಾರೆಂದರೆ ಸಾಕ್ಷಿಯು ನಾವಿಬ್ಬರೂ ಕೆಲವು ಸಾರಿ ಬಂದು ಹೋಗಿರುತ್ತೇವೆ ಎನ್ನುತ್ತಾರೆ. ಅವರಿಗೆ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯಲು ಯಾವದೇ ಅಡ್ಡಿ ಇಲ್ಲ ಎಂದರೆ ಸಾಕ್ಷಿಯು ಅವರು ಮಕ್ಕಳನ್ನು ನೋಡಿಕೊಳ್ಳಬೇಕು, ಹೋಟೆಲ ಊಟ ಸರಿ ಹೊಂದದ ಕಾರಣ ಅವರಿಂದ ನಾನು ಮೊಕ್ತಿಯಾರನಾಮೆಯನ್ನು ಪಡೆದಿರುತ್ತೇನೆ. ವಾದಿಯು ಹುಟ್ಟಿ ಬೆಳೆದಿದ್ದು ಎಲ್ಲವೂ ಹುಬ್ಬಳ್ಳಿಯಲ್ಲಿ ಎಂದರೆ ಸರಿ. ನನಗೆ ವಾದಿಯು ನಮ್ಮ ಮದುವೆ ಪೂರ್ವದಲ್ಲಿ ಅವರ ಮನೆಯಲ್ಲಿ ಆಗಿದ್ದಂತಹ ಬಹುತೇಕ ಕಾರ್ಯಕ್ರಮಗಳ ಬಗ್ಗೆ ತಿಳಿಸಿರುತ್ತಾರೆ. ವಾದಿಯು ಬಂದರೆ ಎಲ್ಲಾ ವಿಚಾರಗಳು ಗೊತ್ತಾಗುತ್ತದೆಂದು ಅವರಿದ ನಾನು ಸುಳ್ಳು ಮೊಕ್ತಿಯಾರ ಪತ್ರವನ್ನು ಪಡೆದು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಈ ದಾವೆಯನ್ನು ವಾದಿಯು ವೈಯಕ್ತಿಕವಾಗಿ ಸಹಿ ಮಾಡಿ ಹಾಕಿರುತ್ತಾರೆಂದರೆ ಸರಿ.

ಈ ಸಂದರ್ಬದಲ್ಲಿ ಪ್ರತಿವಾದಿಯ ಪರ ವಕೀಲರು ಸಮಯ ಕೋರಿದ್ದು ಮುಂದುವರೆದ ಪಾಟೀ ಸವಾಲಗೆ ರೂ.200/- ಗಳ ಖರ್ಚಿನ ಮೇರೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**